**ಲಘುಬರಹ**

# ಕಲಿಯುಗದಲ್ಲಿ ಸತ್ಯವೇ ತಪಸ್ಸು

ಸತ್ಯಾನ್ವೇಷಕ

## ಸತ್ಯಸಂಧ ಹರಿಶ್ಚಂದ್ರ

**"ಕಲಿಯುಗದಲ್ಲಿ ಸತ್ಯವೇ ತಪಸ್ಸು"** ಎಂದು ಶ್ರೀರಾಮಕೃಷ್ಣರು ಹೇಳಿದರು. ಇದರರ್ಥವೇನು? ಕಲಿಯುಗದಲ್ಲಿ ಎಲ್ಲರೂ ಸುಳ್ಳು ಹೇಳುವವರೇ. ಅವರ ನಡುವೆ ಒಬ್ಬ ಸತ್ಯಸಂಧನಾಗಿರಬೇಕೆಂದರೆ ಅದೊಂದು ದೊಡ್ಡ ತಪಸ್ಸೇ! ನಾವು ಸತ್ಯಹರಿಶ್ಚಂದ್ರನ ಪುರಾಣ ಕಥೆಯನ್ನು ಓದುತ್ತೇವೆ. ಆಗಿನ ಕಾಲದಲ್ಲೂ ಸತ್ಯಸಂಧ ರಾಗಿರುವುದು ಎಷ್ಟೊಂದು ಕಷ್ಟಸಾಧ್ಯವಾಗಿತ್ತು? ವಸಿಷ್ಠ ವಿಶ್ವಾಮಿತ್ರರ ಮಾತುಕಥೆಯಾದುದು ದೇವಲೋಕದಲ್ಲಿ. ಬಹುಶಃ ವಿಶ್ವಾಮಿತ್ರನು ದೇವಲೋಕದಲ್ಲಿ ಸತ್ಯವಂತರಾರನ್ನೂ ನೋಡಿರಲಿಲ್ಲ. ಆದ್ದರಿಂದ ನೂರಕ್ಕೆ ನೂರು ಸತ್ಯವನ್ನು ನುಡಿಯುವವರು ಯಾರೂ ಇರಲಾರರು ಎಂಬುದು ಅವನ ನಂಬಿಕೆಯಾಗಿತ್ತು. ಸುಳ್ಳು ಹೇಳುವವರೆಲ್ಲಾ ಸ್ವರ್ಗಸುಖವನ್ನು ಅನುಭವಿಸುತ್ತಾರೆ, ಸತ್ಯವಾಕ್ಯಪರಿಪಾಲಕರು ಹರಿಶ್ಚಂದ್ರನಂತೆ ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ ಎನ್ನಬಹುದೆ? ಸತ್ಯಕ್ಕೆ ಕಟ್ಟುಬಿದ್ದ ಅನೇಕರು ಕಷ್ಟಕ್ಕೊಳಗಾದುದನ್ನು ನಾವು ಪುರಾಣದಲ್ಲಿ ಓದುತ್ತೇವೆ. ಆದರೆ ಶ್ರೀರಾಮಕೃಷ್ಣರು ಅತ್ಯಂತ ಸತ್ಯಸಂಧರಾಗಿಯೂ ಕಷ್ಟಕ್ಕೊಳಗಾಗಲಿಲ್ಲ. ಅವರು ಏನೇ ಕಷ್ಟ ಅನುಭವಿಸಿದ್ದರೂ ಅದು ಸತ್ಯವಾಕ್ಯಪರಿಪಾಲನೆಯಿಂದಾಗಿ ಅಲ್ಲ. ಅವರನ್ನು ಪರೀಕ್ಷೆಗೆ ಒಳಪಡಿಸುವುದಕ್ಕೆ ವಿಶ್ವಾಮಿತ್ರರಾರೂ ಇರಲಿಲ್ಲ ಎಂದು ನೀವು ಆಕ್ಷೇಪಿಸಬಹುದು. ಇಲ್ಲಿ ವಿಶ್ವಾಮಿತ್ರನು ಒಂದು ವ್ಯಕ್ತಿಯಾಗಿ ಇರಬೇಕೆಂದೇನೂ ಇಲ್ಲ. **ಸುಳ್ಳನ್ನು ಹೇಳುವಂತೆ ಪ್ರತಿಬಂಧಿಸುವ ಅನೇಕಾನೇಕ ಜೀವನಸನ್ನಿವೇಶಗಳೇ ವಿಶ್ವಾಮಿತ್ರರು. ಇಂತಹ ಸನ್ನಿವೇಶಗಳು ಎಲ್ಲರ ಜೀವನದಲ್ಲಿಯೂ ಬರುತ್ತವೆ.**

## ಶ್ರೀರಾಮಕೃಷ್ಣರ ಸಾಹಸ

ಆದರೆ ಶ್ರೀರಾಮಕೃಷ್ಣರ ಜೀವನ ಸಂದರ್ಭವೇ ಬೇರೆಯಾಗಿತ್ತು. ಅವರೇನು ವ್ಯಾಪಾರಿಯಾಗಿರಲಿಲ್ಲ, ರಾಜಕಾರಣಿಯಾಗಿರಲಿಲ್ಲ, ಸಂಸಾರ ನಿರ್ವಹಣೆಯ ಹೊರೆ ಇರಲಿಲ್ಲ, ಯಾವ ಹುದ್ದೆಯಲ್ಲೂ ಇಲ್ಲದಿದ್ದುದರಿಂದ ಸುಳ್ಳು ಸಿಕ್ ಲೀವ್ ಹಾಕಬೇಕಾಗಿರಲಿಲ್ಲ. ಅವರು ಲಾಯರ್ರೂ ಆಗಿರಲಿಲ್ಲ. ಅವರು ವೈದ್ಯರೂ ಆಗಿರದೇ ಇದ್ದುದರಿಂದ ಇಲ್ಲದ ರೋಗಕ್ಕೆ ಔಷಧಿ ನೀಡುವ ಸಂದರ್ಭಗಳಿರಲಿಲ್ಲ. ಅವರಿಗೆ ಪಡೆದುಕೊಳ್ಳುವುದೂ ಇರಲಿಲ್ಲ, ಕಳೆದುಕೊಳ್ಳುವುದೂ ಇರಲಿಲ್ಲ. ಆದ್ದರಿಂದ ಯಾವುದಕ್ಕಾಗಿ ತಾನೇ ಅವರು ಸುಳ್ಳು ಹೇಳಬೇಕಾಗಿತ್ತು?

ಅವರು ಪಡೆಯಬೇಕಾಗಿದ್ದುದು ದೇವರೊಬ್ಬನನ್ನೇ. ಆ ದೇವರನ್ನು ಪಡೆಯುವುದಕ್ಕೆ ಸತ್ಯವನ್ನೂ ಹೇಳಬೇಕಾಗಿಲ್ಲ, ಸುಳ್ಳನ್ನೂ ಹೇಳಬೇಕಾಗಿಲ್ಲ, ಸುಮ್ಮನೆ ಇರಬೇಕಷ್ಟೆ ಶ್ರೀರಾಮಕೃಷ್ಣರು ಸುಮ್ಮನೆ ಇದ್ದರೆ?! ಎಷ್ಟೊಂದು ಮಾತನಾಡಿದರು! ಕೆಲವರು ಸುಳ್ಳು ಹೇಳಬೇಕಾಗಬಹುದೆಂಬ ಭಯದಿಂದ ಕಡಮೆ ಮಾತನಾಡುತ್ತಾರೆ. ಆದರೆ ಶ್ರೀರಾಮಕೃಷ್ಣರು ಅಷ್ಟು ಮಾತನಾಡಿದರೂ ಒಂದೇ ಒಂದು ಸುಳ್ಳು ಹೇಳಲಿಲ್ಲ. ಎಂಥ ಸಾಹಸ! ಅವರು ಏನೇ ಹೇಳಿದರೂ ಅದೇ ಸತ್ಯವಾಗುತ್ತಿತ್ತು. ಅವರು ಮಹಾಪುರುಷರಲ್ಲವೇ? ಅವರ ಮಾತುಗಳೆಲ್ಲವೂ ಸತ್ಯಸ್ವರೂಪಿಯಾದ ದೇವರನ್ನೇ ಅವಲಂಬಿಸಿದ್ದವು. ಆದ್ದರಿಂದ ಅಲ್ಲಿ ಸುಳ್ಳಿಗೆ ಅವಕಾಶವೇ ಇರಲಿಲ್ಲ.

## ವ್ಯವಹಾರದಲ್ಲಿ ಸತ್ಯ

ಆದರೆ ನಮ್ಮ ಮಾತುಗಳೆಲ್ಲವೂ ಮಿಥ್ಯಾವಿಷಯ ವಸ್ತುಗಳನ್ನು ಅವಲಂಬಿಸಿರುವುದರಿಂದ ನಮ್ಮ ಮಾತುಗಳೆಲ್ಲವೂ ಸುಳ್ಳೇ. ನಾವು ಸತ್ಯವನ್ನು ಹೇಳಿದರೂ ಸುಳ್ಳೇ! ಹಗ್ಗವನ್ನು ನೋಡಿ ಅದು ಹಾವು ಎಂದು ಹೇಳಿದರೆ ಅದು ಸುಳ್ಳು ಎನ್ನುತ್ತೇವೆ. ಅದು ಹಗ್ಗ ಎಂದು ಹೇಳಿದರೂ ಸುಳ್ಳೇ. ಏಕೆಂದರೆ ಅದು ಮಾಯೆ. ಅಲ್ಲಿ ನಿಜವಾಗಿ ಇರುವುದು ಚೈತನ್ಯ. ಅದು ಹಗ್ಗವಲ್ಲ. ಹಾಗಾದರೆ ಅಲ್ಲಿ ಚೈತನ್ಯವನ್ನು ನೋಡಿದೆ ಎಂದು ಹೇಳಿದರೂ ಸುಳ್ಳಾಗುತ್ತದೆ, ಏಕೆಂದರೆ ಚೈತನ್ಯವನ್ನು ನೋಡಲಾಗುವುದಿಲ್ಲ. ಅಂದಹಾಗೆ ಅದ್ವೈತಿಗಳಿಗಿಂತಲೂ ದ್ವೈತಿಗಳೇ ಹೆಚ್ಚು ಸತ್ಯವಂತರೆಂದು ಭಾವಿಸೋಣವೇ? ಅಥವಾ ವ್ಯಾವಹಾರಿಕವಾಗಿ ದ್ವೈತ, ಆಧ್ಯಾತ್ಮಿಕವಾಗಿ ಅದ್ವೈತ ಎಂದು ಹೇಳಲಾದೀತೆ? ಇಂಥ ಅವ್ಯವಹಾರ ಸರಿಯಲ್ಲ ಎಂದು ದ್ವೈತಿಗಳು ಕೋಪಿಸಿಕೊಳ್ಳಬಹುದು. ಆದರೆ ಶ್ರೀರಾಮಕೃಷ್ಣರ "ಅದ್ವೈತವನ್ನು ಬಟ್ಟೆಯ ತುದಿಯಲ್ಲಿ ಕಟ್ಟಿಕೊಂಡು ವ್ಯವಹಾರವನ್ನು ನಡೆಸು" ಎಂಬ ಮಾತಿಗೆ ಅರ್ಥವೇನು? ವ್ಯವಹಾರದಲ್ಲಿ ಅದ್ವೈತ ನಡೆಯುವುದಿಲ್ಲ ಎಂದರ್ಥವಲ್ಲವೇ? ಅದ್ವೈತ ಆಧ್ಯಾತ್ಮಿಕ ಕ್ಷೇತ್ರಕ್ಕೆ ಮಾತ್ರ ಅನ್ವಯಿಸುವಂತಹುದು ಎಂದಾಗುವುದಿಲ್ಲವೇ? ಹೋಗಲಿ. ಈ ದ್ವೈತಾದ್ವೈತ ವಿವಾದಕ್ಕೆ ಶ್ರೀರಾಮಕೃಷ್ಣರನ್ನು ಎಳೆತರುವುದು ಬೇಡ.

## ಕಟ್ಟುನಿಟ್ಟಿನ ಸತ್ಯಪಾಲನೆ

ಈಗ ಸತ್ಯದ ವಿಚಾರಕ್ಕೆ ಬರೋಣ. ಶ್ರೀರಾಮಕೃಷ್ಣರು ಅತ್ಯಂತ ಕಟ್ಟುನಿಟ್ಟಾಗಿ ಸತ್ಯವಚನವನ್ನು ಪಾಲಿಸುತ್ತಿದ್ದರು."ಇಂದು ನಾನು ಲೂಚಿ(ಪೂರಿ)ಯನ್ನು ತಿನ್ನುವುದಿಲ್ಲ" ಎಂದು ಅಚಾನಕವಾಗಿ ಅವರು ಹೇಳಿದರೂ ಅಂದು ಅವರಿಗೆ ಲೂಚಿಯನ್ನು ತಿನ್ನಲು ಆಗುತ್ತಿರಲಿಲ್ಲ. ಅವರು ಏಕೆ ಹಾಗೆ ಮಾಡುತ್ತಿದ್ದರು ಎಂದು ನಮಗೆ ಆಶ್ಚರ್ಯವಾಗುತ್ತದೆ. ಲೂಚಿಯನ್ನು ತಿಂದರೂ, "ಅದು ದೇಹದ ಕಾರ್ಯ, ನಾನೇನೂ ತಿನ್ನಲಿಲ್ಲ" ಎಂದು ಹೇಳಬಹುದಿತ್ತಲ್ಲ!

ಅವರೇ ಹೇಳಿದ ಕಥೆಯು ಇದಕ್ಕೆ ಆಧಾರವಾಗಬಹುದು. ಗೋಪಿಯರು ನದಿ ದಾಟಿ ಹೋಗಬೇಕಾಗಿತ್ತು. ಯಮುನಾ ನದಿ ಪ್ರವಾಹದಿಂದ ಉಕ್ಕಿ ಹರಿಯುತ್ತಿದೆ. ಅವರು ಸಹಾಯಕ್ಕಾಗಿ ವ್ಯಾಸರ ಹತ್ತಿರ ಹೋದರು. ವ್ಯಾಸರು ತಮಗೆ ತುಂಬ ಹಸಿ

ವಾಗುತ್ತಿವೆ, ಏನಾದರೂ ತಿನ್ನುವುದಕ್ಕೆ ನೀಡಿ ಎಂದರು. ಗೋಪಿಯರು ತಮ್ಮ ಹತ್ತಿರ ಇದ್ದ ತಿನ್ನುವ ಪದಾರ್ಥವನ್ನೆಲ್ಲಾ ವ್ಯಾಸರಿಗೆ ಕೊಟ್ಟರು. ವ್ಯಾಸರು ಹೊಟ್ಟೆ ತುಂಬಾ ತಿಂದು ತೇಗಿದರು. ಈಗ ನದಿಯ ಹತ್ತಿರ ಹೋಗಿ 'ನಾನೇನನ್ನೂ ತಿನ್ನದೇ ಇರುವುದು ಸತ್ಯವಾದರೆ ನದಿಯು ಇಬ್ಭಾಗವಾಗಲಿ' ಎಂದು ಹೇಳಿದರು. ನದಿ ಇಬ್ಭಾಗವಾಗಿ ಗೋಪಿಯರಿಗೆ ದಾರಿ ಮಾಡಿಕೊಟ್ಟಿತು. (ಇದು ನದಿಯ ದೋಷವೋ ವ್ಯಾಸರ ದೋಷವೋ ತಿಳಿಯದು. ಶ್ರೀಮಾತೆಯವರು ದೋಷವನ್ನು ನೋಡಬಾರದು ಎಂದು ಹೇಳಿದ್ದಾರೆ. ಆದ್ದರಿಂದ ಸುಮ್ಮನಿದ್ದುಬಿಡೋಣ). ಊಟವನ್ನು ತಿನ್ನುವುದಿಲ್ಲ ಎಂದು ಹೇಳುವುದಾಗಲೀ, ಅದನ್ನು ತಿನ್ನುವುದಾಗಲಿ ಎರಡೂ ದೇಹದ ಕಾರ್ಯಗಳೇ.

## ಇಲ್ಲದ 'ನಾನು'

ದೇಹ ಜಡ. ಜಡವಸ್ತುವಿಗೆ ಸತ್ಯ ಸುಳ್ಳು ಮುಂತಾದ ನೈತಿಕ ಭಾವನೆಗಳು ಅನ್ವಯಿಸುವುದಿಲ್ಲ. ಆತ್ಮನಿಗೂ (ಚೈತನ್ಯಕ್ಕೂ) ಇವು ಅನ್ವಯಿಸುವುದಿಲ್ಲ. ಜಡ ಚೇತನಗಳಲ್ಲದೆ ಇನ್ನಾವುದಿದೆ ಈ ಪ್ರಪಂಚದಲ್ಲಿ? ಇದೆಯೆನ್ನಲಾಗದ, ಇಲ್ಲವೆನ್ನಲಾಗದ ಒಂದು ರಹಸ್ಯಾತ್ಮಕ ವಸ್ತುವಿದೆ. ಅದೇ 'ನಾನು.' ಈ 'ನಾನು'ವೇ ಸುಳ್ಳು ಹೇಳುತ್ತದೆ, ಸತ್ಯ ಹೇಳುತ್ತದೆ, ಸುಳ್ಳನ್ನು ಸತ್ಯವಾಗಿಸುತ್ತದೆ, ಸತ್ಯವನ್ನು ಸುಳ್ಳಾಗಿಸುತ್ತದೆ. 'ನಾನು'ವೇ ಮಿಥ್ಯವಾಗಿರುವಾಗ ಅದು ಸತ್ಯವನ್ನು ಹೇಳಿದರೂ ಸುಳ್ಳೇ, ಸುಳ್ಳನ್ನು ಹೇಳಿದರೂ ಸುಳ್ಳೇ. **ಶ್ರೀರಾಮಕೃಷ್ಣರಲ್ಲಿ 'ನಾನು'ವೇ ಇರಲಿಲ್ಲ. ಆದ್ದರಿಂದ ಅವರ ನುಡಿಗಳೆಲ್ಲವೂ ಸತ್ಯವೇ ಆಗಿದ್ದವು.**

ಸತ್ಯ ಮತ್ತು ಸುಳ್ಳು ವಾಕ್ಯಗಳೆರಡೂ ಒಂದೇ ಅಕ್ಷರಗಳಿಂದ ಆಗಿವೆ, ಎರಡೂ ವಿವಿಧ ಧ್ವನಿಗಳಷ್ಟೇ. ಶ್ರೀರಾಮಕೃಷ್ಣರೇ ಹೇಳುತ್ತಿದ್ದಂತೆ, ಪವಿತ್ರಶಬ್ದಗಳಲ್ಲಿರುವ ಅಕ್ಷರಗಳೇ ಅಶ್ಲೀಲ ಶಬ್ದಗಳಲ್ಲಿಯೂ ಇರುತ್ತವೆ. ಶ್ರೀರಾಮಕೃಷ್ಣರಂತಹ ದ್ವಂದ್ವಾತೀತರಿಗೆ ಈ ಪ್ರಪಂಚಕ್ಕೆ ಸಂಬಂಧಿಸಿದ ದ್ವೈತಭಾವನೆಗಳೆಲ್ಲವೂ ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತವೆ.

ಹಾಗಾದರೆ ಅವರೇಕೆ ಸತ್ಯವಚನಕ್ಕೆ ಅಷ್ಟೊಂದು ಪ್ರಾಧಾನ್ಯ ನೀಡುತ್ತಿದ್ದರು? ಅವರು ತಮ್ಮ ಒಂದು ಪ್ರಾರ್ಥನೆಯಲ್ಲಿ ಎಲ್ಲ ದ್ವಂದ್ವಗಳನ್ನೂ ದೇವರಿಗೆ ಅರ್ಪಿಸಿ ತಮಗೆ ಶುದ್ಧ ಭಕ್ತಿಯನ್ನು ನೀಡು ಎಂದು ಪ್ರಾರ್ಥಿಸುತ್ತಾರೆ: "ಹೇ ತಾಯಿ! ತೆಗೆದುಕೋ ನಿನ್ನ ಜ್ಞಾನ ಮತ್ತು ಅಜ್ಞಾನಗಳನ್ನು, ನಿನ್ನ ಶುದ್ಧ ಮತ್ತು ಅಶುದ್ಧವನ್ನು, ನಿನ್ನ ಒಳ್ಳೆಯದು ಮತ್ತು ಕೆಟ್ಟದನ್ನು, ನಿನ್ನ ಪಾಪ ಮತ್ತು ಪುಣ್ಯಗಳನ್ನು. ಹೇ ತಾಯಿ! ನನಗೆ ಶುದ್ಧ ಭಕ್ತಿಯನ್ನು ಮಾತ್ರ ನೀಡು." "ಎಲ್ಲವನ್ನು ಭಗವಂತನಿಗೆ ಅರ್ಪಿಸಿದೆ, ಆದರೆ ಸತ್ಯವನ್ನು ಮಾತ್ರ ಅರ್ಪಿಸಲಾಗಲಿಲ್ಲ, ಸತ್ಯವನ್ನೇ ಬಿಟ್ಟುಬಿಟ್ಟರೆ ಈ ಪ್ರಪಂಚದಲ್ಲಿ ಹೇಗೆ ಇರುವುದು?" ಎನ್ನುತ್ತಾರೆ ಅವರು. ಆದರೆ ನಮ್ಮ ಜನ ಸತ್ಯವನ್ನು ಬಿಡದೆ ಹೇಗೆ ತಾನೇ ಬದುಕಲು ಸಾಧ್ಯ? ಎಂದು ಕೇಳುತ್ತಾರೆ. ಅವರು ಹೇಳುವ ಒಂದೇ ಸತ್ಯವೆಂದರೆ, ಸತ್ಯವನ್ನೇ ಹೇಳಿದರೆ ಈ ಪ್ರಪಂಚದಲ್ಲಿ ಬದುಕುವುದಕ್ಕಾಗುವುದಿಲ್ಲ ಎಂಬ ವಾಸ್ತವಿಕ ಸಂಗತಿಯನ್ನು ಮಾತ್ರ

ಪ್ರಾಪಂಚಿಕ ವ್ಯವಹಾರವೆಂದರೆ ಸತ್ಯಾಸತ್ಯಗಳ ಮಿಶ್ರಣ. ಆದ್ದರಿಂದಲೆ ತಮ್ಮ ಬ್ರಹ್ಮಸೂತ್ರ ಭಾಷ್ಯದ ಅವತರಣಿಕೆಯಲ್ಲಿ ಶ್ರೀಶಂಕರಾಚಾರ್ಯರು ಹೇಳುತ್ತಾರೆ: **"ಸತ್ಯಾನೃತೇ ಮಿಥುನೀಕೃತ್ಯ ಅಹಮಿದಮ್ ಮಮೇದಮಿತಿ ನೈಸರ್ಗಿಕೋಽಯಮ್ ಲೋಕ ವ್ಯವಹಾರಃ."**– 'ನಾನು ಇದು', 'ಇದು ನನ್ನದು" ಎಂಬ ನೈಸರ್ಗಿಕವಾದ ಲೋಕವ್ಯವಹಾರವು ಉಂಟಾಗುವುದು ಸತ್ಯ ಮತ್ತು ಸುಳ್ಳುಗಳು ಪರಸ್ಪರ ಬೆರೆತುಕೊಳ್ಳುವುದರಿಂದಲೇ (ಇಲ್ಲಿ 'ನಾನು' ಎಂಬುದು ಸತ್ಯ. ಆದರೆ ದೇಹ ಮುಂತಾದ ಸುಳ್ಳು ವಸ್ತುಗಳಲ್ಲಿ 'ನಾನು' ಎಂದು ಬೆರೆಸಿಕೊಂಡು ನೋಡುವ ವ್ಯವಹಾರ ಮಿಥ್ಯ).

**ಸರ್ವಸಂಗಪರಿತ್ಯಾಗಿಗಳಾದ ಶ್ರೀರಾಮಕೃಷ್ಣರಿಗೆ ಸತ್ಯವನ್ನು ಮಾತ್ರ ಬಿಡಲಾಗಲಿಲ್ಲವಲ್ಲ! ಸತ್ಯವೇ ಅವರಾಗಿದ್ದುದರಿಂದ ಅದನ್ನು ಬಿಡುವ ಪ್ರಸಂಗವೇ ಅವರಿಗೆ ಬರಲಿಲ್ಲ. ನಾವೂ ಶ್ರೀರಾಮಕೃಷ್ಣರನ್ನು ಆಶ್ರಯಿಸಿದರೆ ಸತ್ಯವನ್ನೇ ಆಶ್ರಯಿಸಿದಂತಾಗುತ್ತದೆ. ಆಗ ನಾವೂ ಸತ್ಯಪರಾಯಣರಾಗುತ್ತೇವೆ, ಅಲ್ಲವೇ?** ■

---



**ಶ್ರೀರಾಮಕೃಷ್ಣರು ಯಾವಾಗಲೂ ತಮ್ಮ ಶಿಷ್ಯರ ಆಧ್ಯಾತ್ಮಿಕ ಸಾಧನೆಯ ಮೇಲೆ ಒಂದು ಕಣ್ಣು ಇಟ್ಟೇ ಇರುತ್ತಿದ್ದರು; ಅವರು ಎಷ್ಟು ತಿನ್ನುತ್ತಾರೆ, ಎಷ್ಟು ಹೊತ್ತು ಮಲಗುತ್ತಾರೆ ಎಲ್ಲವನ್ನೂ ಗಮನಿಸುತ್ತಿದ್ದರು. ಮಧ್ಯಾಹ್ನ ಹೊಟ್ಟೆ ತುಂಬ ಊಟ ಮಾಡುವುದನ್ನು ಒಪ್ಪಿದರೂ, ರಾತ್ರಿ ಹೊಟ್ಟೆಯನ್ನು ಭರ್ತಿಮಾಡಿಕೊಳ್ಳುವುದನ್ನು ಒಪ್ಪುತ್ತಿರಲಿಲ್ಲ; ಏಕೆಂದರೆ ರಾತ್ರಿಯೇ ಸಾಧನೆಯ ಕಾಲ. ಒಂದು ದಿನ ಅವರು ಯೋಗಿನ್‌ನನ್ನು (ಸ್ವಾಮಿ ಯೋಗಾನಂದರ ಹಿಂದಿನ ಹೆಸರು)"ನೀನು ರಾತ್ರಿ ಏನು ಊಟ ಮಾಡುವೆ?" ಎಂದು ಪ್ರಶ್ನಿಸಿದರು. "ಒಂದು ಪೌಂಡ್ ಹಿಟ್ಟಿನಿಂದ ತಯಾರಿಸಿದ ರೊಟ್ಟಿ ಹಾಗೂ ಅರ್ಧ ಪೌಂಡ್ ಆಲೂಗಡ್ಡೆ ಪಲ್ಯ" ಎಂದು ಉತ್ತರಿಸಿದ ಯೋಗಿನ್. ತಕ್ಷಣವೇ ಶ್ರೀರಾಮಕೃಷ್ಣರೆಂದರು: "ಹೇ ಭಗವಂತ! ನೀನು ನನಗೆ ಸೇವೆ ಮಾಡುವುದು ಬೇಡ. ನಿನಗೆ ನಾನು ಪ್ರತಿದಿನ ಅಷ್ಟೊಂದು ಆಹಾರ ಒದಗಿಸಲಾರೆ. ನೀನು ಇಲ್ಲಿಗೆ ಬರುವುದಕ್ಕಿಂತ ಮುಂಚೆ ಮನೆಯಲ್ಲೇ ಊಟ ಮುಗಿಸಿಕೊಂಡು ಬಾ." ಊಟದ ವಿಚಾರದಲ್ಲಿ ಯೋಗಿನ್ ಅನುಷ್ಠಾನ ಮಾಡಲಾರಂಭಿಸಿದ. ಅವನು ಯಾರ ಮನೆಯಲ್ಲೂ ನೀರು ಸಹ ಕುಡಿಯುತ್ತಿರಲಿಲ್ಲ. ಒಂದು ದಿನ ಬೆಳಗ್ಗೆ ಮನೆಯಲ್ಲಿ ಸ್ವಲ್ಪ ತಿಂಡಿ ತಿಂದು, ಅನಂತರ ಶ್ರೀರಾಮಕೃಷ್ಣರ ಜೊತೆಯಲ್ಲಿ ಕೊಲ್ಕತಾಗೆ ಹೊರಟ. ಅವರು ಅನೇಕ ಸ್ಥಳಗಳಿಗೆ ಭೇಟಿಕೊಟ್ಟರು; ಆದರೆ ಯೋಗಿನ್‌ನ ನಿಯಮ ಗೊತ್ತಿದ್ದ ಅವರು ಎಲ್ಲಿಯೂ ಅವನಿಗೆ ತಿನ್ನುವಂತೆ ಹೇಳಲಿಲ್ಲ. ಆದರೆ ಸಂಜೆ ಬಲರಾಮ ಬಸುವಿನ ಮನೆಯಲ್ಲಿ, ಯೋಗಿನ್‌ಗೆ ಬಡಿಸುವಂತೆ ಬಲರಾಮನಿಗೆ ಹೇಳಿದರು. ಹಿಂದೆ ಯೋಗಿನ್ ಬಲರಾಮನ ಮನೆಯಲ್ಲಿ ಪ್ರಸಾದವನ್ನು ತೆಗೆದುಕೊಂಡಿದ್ದುದು ಅವರಿಗೆ ತಿಳಿದಿತ್ತು. ಬಲರಾಮ ತಕ್ಷಣವೇ ಯೋಗಿನ್‌ಗೆ ಹೊಟ್ಟೆತುಂಬ ಪುಷ್ಕಳವಾದ ಊಟ ಬಡಿಸಿದ. ಶ್ರೀರಾಮಕೃಷ್ಣರು ಆಗಾಗ್ಗೆ ಭಾವಾವಿಷ್ಟರಾಗಿ ಮೈಮರೆಯುತ್ತಿದ್ದರು. ಆದರೂ ತಮ್ಮ ಶಿಷ್ಯರೆಲ್ಲರ ಶಾರೀರಿಕ ಹಾಗೂ ಮಾನಸಿಕ ಸ್ಥಿತಿಗತಿಗಳ ಮೇಲೆ ನಿಗಾ ಇಟ್ಟಿರುತ್ತಿದ್ದರು.** (ಸ್ವಾಮಿ ಯೋಗಾನಂದ ಜಯಂತಿ, ಮಾರ್ಚ್ ೨೫)